ತೀನಂಶ್ರೀ ಅವರಿಗೆ ಅಪಾರ ಶ್ರದ್ಧೆ. ಆ ಕೆಲಸ ಚುರುಕಾಗಿ ಆಗಬೇಕು ಎನ್ನುವುದು ಅವರ ಕಳಕಳಿ. ಬರಿಯ ಮುದ್ರಕನಿಗಿಂತ, ಸಾಹಿತ್ಯ ತಿಳಿದುಕೊಂಡಿರುವ ಒಬ್ಬ ಮುದ್ರಕ ಇದ್ದರೆ, ಆ ಕೆಲಸ ಶ್ರದ್ಧೆಯಿಂದ ಆಗುತ್ತದೆ ಎನ್ನುವುದು ಅವರ ನಂಬಿಕೆ. ಅದಕ್ಕಾಗಿ ನಾನು ಪರಿಷತ್ತಿಗೆ ಹೋಗಿ ಸೇರಿಕೊಳ್ಳಲೇಬೇಕು ಎನ್ನುವುದು ಅವರ ಅಪೇಕ್ಷೆ.

ಸರಿ, ಪರಿಷತ್ತಿನ ಪ್ರೆಸ್ಸಿಗೆ ಮೇಲ್ವಿಚಾರಕನಾಗಿ ನಾನು ಬಂದು ಸೇರಿಕೊಂಡದ್ದೂ ಆಯಿತು.

ಪ್ರತಿ ತಿಂಗಳೂ ಮೂರು ದಿನ ನಿಘಂಟು ಕಾರ್ಯಾಲಯದಲ್ಲಿ ವಿದ್ವಾಂಸರೆಲ್ಲರೂ ಸೇರುತ್ತ ಇದ್ದರು. ತೀನಂಶ್ರೀ, ಡಿ.ಎಲ್.ಎನ್., ಮರಿಯಪ್ಪ ಭಟ್ಟ, ಮಾಳವಾಡ, ರಾಘವಾಚಾರ್– ಎಲ್ಲರೂ ಕನ್ನಡ ಸಾರಸ್ವತ ಲೋಕದ ಘಟಾನುಘಟಿಗಳು.

ಈ ಮೂರು ದಿನಗಳಲ್ಲಿ ಕನ್ನಡದ ಶಬ್ದಗಳ ಬಗ್ಗೆ ಚರ್ಚೆ. ಅವು ಯಾವ ಯಾವ ಕಾವ್ಯಗಳಲ್ಲಿ ಬರುತ್ತವೆ. ಅದರ ಹುಟ್ಟು, ಬೆಳವಣಿಗೆ ಹೇಗೆ ಇತ್ಯಾದಿ. ವಿದ್ವತ್ ಪ್ರಪಂಚದಲ್ಲಿ ವಾಸ್ತವವಾಗಿ ಇವು ಅತ್ಯಮೂಲ್ಯವಾದ ದಿನಗಳು.

ತೀನಂಶ್ರೀ ಒಂದು ಸಲವೂ ಈ ಮೀಟಿಂಗಿಗೆ ತಪ್ಪಿಸಿಕೊಂಡ ಹಾಗೆ ನನಗೆ ನೆನಪಿಲ್ಲ. ಉತ್ಸಾಹದಿಂದ ಶ್ರದ್ಧೆಯಿಂದ ಈ ಕೆಲಸದಲ್ಲಿ ಅವರು ಪಾಲುಗೊಳ್ಳುತ್ತ ಇದ್ದರು.

ಎಲ್ಲರಿಗಿಂತ ಮೊದಲೇ ಸಂಪಾದಕರಾದ ಬಸವಾರಾಧ್ಯರೂ ಇವರೂ ಕಚೇರಿಗೆ ಬಂದುಬಿಡುತ್ತ ಇದ್ದರು.

ಒಂದು ಸಲ ಬಸವಾರಾಧ್ಯರು ಬರುವುದು ಸ್ವಲ್ಪ ವಿಳಂಬವಾಯಿತು. ತೀನಂಶ್ರೀ ಆಗಲೇ ಬಂದು ಬಿಟ್ಟಿದ್ದಾರೆ.

ನಾನು ಮುದ್ರಣಕ್ಕೆ ಹೋಗುತ್ತ ಇರುವ ಎಂಟು ಪುಟಗಳು ನಿಘಂಟಿನ ಮಿಷನ್ ಪ್ರೂಫ್ ನೋಡುತ್ತ ಕುಳಿತಿದ್ದೆ.

ನನ್ನ ಮೇಜು ಚಿಕ್ಕದು. ನಿಘಂಟು ಡೆಮ್ಮಿ ಆಕಾರದ ದೊಡ್ಡ ಪುಟಗಳು. ನನ್ನ ಮೇಜಿಗೆ ಸರಿಯಾಗಿ ಈ ಹಾಳೆ ಹರಡಿಕೊಂಡು ತುಂಬಿಕೊಳ್ಳುತ್ತಿತ್ತು. ಇದರ ಅಕ್ಷರಗಳೋ ತೀರಾ ಸಣ್ಣವು. ಇರುವೆಯ ಸಾಲಿನ ಹಾಗೆ; 6 ಪಾಯಿಂಟ್, 8 ಪಾಯಿಂಟ್; 10 ಪಾಯಿಂಟ್– ಕಣ್ಣಿಗೆ ಸರ್ಕಸ್ ಮಾಡಿಸುವ ಅಕ್ಷರಗಳು.

ನಾನು ಅವುಗಳ ಸಾಲು ಸಾಲುಗಳ ಮೇಲೆ ನಿಧಾನವಾಗಿ ಕಣ್ಣಾಡಿಸುತ್ತಾ ಇದ್ದೆ. ನಿಧಾನವಾಗಿಯೇ ಕಣ್ಣಾಡಿಸಬೇಕು. ಇಲ್ಲದಿದ್ದರೆ ಸಾಲುಗಳು ಮೀನಿನಂತೆ ಜಾರಿ ಬಿಡುತ್ತವೆ. ಕನ್ನಡದಲ್ಲಿ ಒಂದು ಶಬ್ದಕ್ಕೆ ಏನೆಲ್ಲ ಅರ್ಥಗಳು ಇವೆ ಎಂದು ನನ್ನ ಭಾಷೆಯ ಬಗ್ಗೆ ಬೆರಗು; ಅಭಿಮಾನ.

ಆಗ ತೀನಂಶ್ರೀ ಮೆಲ್ಲಗೆ ಮೆಲ್ಲಗೆ ಬಂದು ನನ್ನ ಎದುರಿಗೇ ಗೋಡೆಗೆ ಸೇರಿದ ಹಾಗೆ ಇರುವ ಕುರ್ಚಿಯಲ್ಲಿ ನನ್ನನ್ನೇ ನೋಡುತ್ತ ಕುಳಿತುಬಿಟ್ಟಿದ್ದಾರೆ. ನಾನು ತಲೆಯೆತ್ತುತ್ತಲೇ ಇಲ್ಲ. ಪ್ರೂಫ್ ನೋಡುತ್ತ ಇದ್ದೇನೆ.

ಕಣ್ಣಿಗೆ ಸ್ವಲ್ಪ ಹಿಂಸೆಯಾದ ಮೇಲಷ್ಟೆ ನಾನು ತಲೆಯೆತ್ತಿದೆ. ತಲೆಯೆತ್ತಿದರೆ ನನ್ನ ಎದುರಿನ ಕುರ್ಚಿಯಲ್ಲಿ ಲಕ್ಷಣವಾಗಿ ತೀನಂಶ್ರೀ.

ಥಟ್ಟನೆ ನಾನು ಮೇಲೆದ್ದು 'ನಮಸ್ಕಾರ ಸಾರ್. ನೀವು ಬಂದು ಕುಳಿತದ್ದನ್ನು ನಾನು ಗಮನಿಸಲಿಲ್ಲ...' ಎಂದೆ.

'ಅದಕ್ಕೇ ಶೇಷನಾರಾಯಣ, ನೀವು ಇಲ್ಲಿಗೆ ಬರಬೇಕು ಅಂತ ನಾನು ಒತ್ತಾಯ ಮಾಡಿದ್ದು, ನೋಡಿ, ನಾನು ಬಂದು ಇಲ್ಲಿ ಕುಳಿತು ಐದು ನಿಮಿಷ ಆಯ್ತು. ನೀವು ತಲೆಯೆತ್ತಿ ಸಹ ನೋಡದೆ ಎಷ್ಟು ಶ್ರದ್ಧೆಯಾಗಿ ಕೆಲಸ ಮಾಡ್ತಾ ಇದೀರ. ನನಗೆ ಇಂಥವರೇ ಬೇಕಾಗಿತ್ತು...'

ತೀನಂಶ್ರೀ ಅವರನ್ನು ಮತ್ತೆ ನಾನು ನೋಡಲು ಸಾಧ್ಯವಾಗಲಿಲ್ಲ. ಅದೇ ಕೊನೆಯ ಸಲ. ಅವರು ಕಲ್ಕತ್ತೆಗೆ ಹೋದರು. ಕನ್ನಡದ ಈ ಶ್ರೇಷ್ಠ ವಿದ್ವಾಂಸ. ಈ ಹೃದಯಸಂಪನ್ನ, ಅಲ್ಲಿ ಹೋಗಿ ನಮ್ಮಿಂದ ಕಣ್ಮರೆಯಾಗಿಬಿಟ್ಟರು.

(ಸೆಪ್ಟೆಂಬರ್, 1998)